ಇ) ಈ ನೆರೆಯಿಂದ ಒಟ್ಟು 3,13,200 ಹೆಕ್ಟೇರ್‌ಗಳಲ್ಲಿ ಇದ್ದ ಬೆಳೆ ನಾಶ ಹೊಂದಿದ್ದು 140.47 ಕೋಟಿ ರೂ.ಗಳು ನಷ್ಟವೆಂದು ಅಂದಾಜಿಸಲಾಗಿದೆ.

ಈ) ಈ ನೆರೆ ಹಾವಳಿಯಿಂದ ಅಸು ನೀಗಿದ ಒಟ್ಟು ಜಾನುವಾರುಗಳ ಸಂಖ್ಯೆ 60751, ಇದರಿಂದಾದ ನಷ್ಟದ ಮೊತ್ತ 350.986 ಲಕ್ಷ ರೂ.ಗಳು.

ಉ) ಈ ನೆರೆ ಹಾವಳಿಯಿಂದಾದ ಖಾಸಗಿ ಆಸ್ತಿ–ಪಾಸ್ತಿಗೆ ರೂ. 207.15 ಕೋಟಿ ನಷ್ಟವಾಗಿದೆ. ಸಾರ್ವಜನಿಕ ಆಸ್ತಿ–ಪಾಸ್ತಿಗೆ ರೂ. 100.72 ಕೋಟಿಗಳ ನಷ್ಟವಾಗಿದೆ. ಒಟ್ಟು ನಷ್ಟದ ಮೊತ್ತ 307.87 ಕೋಟಿ ರೂ.ಗಳು.

ಕೋಲಾರ ಜಿಲ್ಲೆಯಲ್ಲಿ 1991ನೇ ಸಾಲಿನಲ್ಲಿ ಅತಿವೃಷ್ಟಿಯಿಂದ ಉಂಟಾದ ಹಾನಿಗೆ ಹಣ ಮಂಜೂರಾತಿ

198 (41). ಶ್ರೀ ಎಂ.ವಿ. ವೆಂಕಟಪ್ಪ (ಮುಳಬಾಗಿಲು):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕೋಲಾರ ಜಿಲ್ಲೆಯಲ್ಲಿ 1991ನೇ ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಅತಿ ಹೆಚ್ಚಾದ ಅತಿವೃಷ್ಟಿಯ ಪರಿಣಾಮವಾಗಿ ಉಂಟಾದ ನಷ್ಟಗಳನ್ನು ಭರಿಸಲು ಎಷ್ಟು ಕೋಟಿ ಹಣ ಬೇಕೆಂದು ಅಧಿಕಾರಿಗಳು ಕೋರಿದ್ದರು.

ಆ) ಯಾವ ಯಾವ ಬಾಬ್ತಿಗೆ ಅಂದರೆ,

1. ರಸ್ತೆ ರಿಪೇರಿಗಳು
2. ಶಾಲಾ ಮತ್ತು ಕಟ್ಟಡಗಳ ರಿಪೇರಿಗೋಸ್ಕರ
3. ಕೆರೆ ಕೋಡಿಗಳ, ತೂಬು ರಿಪೇರಿಗಳ, ಕೆರೆಗಳ ಇತರ ರಿಪೇರಿಗೋಸ್ಕರ
4. ಬಿದ್ದು ಹೋದ ಮನೆಗಳನ್ನು ಕಟ್ಟುವುದಕ್ಕೋಸ್ಕರ
5. ವ್ಯಕ್ತಿಗಳ ಸಾವಿಗೆ ಅವರ ತಂದೆ ತಾಯಿಗಳಿಗೆ ಧನ ಸಹಾಯ ಕೊಡುವುದಕ್ಕೋಸ್ಕರ ಎಷ್ಟು ಹಣ ಕೇಳಿದ್ದರು ?

ಇ) ಈ ಮೇಲ್ಕಂಡ ಬಾಬ್ತುಗಳಿಗೆ ಸರ್ಕಾರದವರು ಕೊಟ್ಟ ಹಣವೆಷ್ಟು ?

ಈ) ಇನ್ನೂ ಅನೇಕ ಶಾಲಾ ಕಟ್ಟಡಗಳು, ಕೆರೆಗಳು, ರಸ್ತೆಗಳು ರಿಪೇರಿಯಾಗದೆ, ವಿದ್ಯಾರ್ಥಿಗಳು, ಸಾರ್ವಜನಿಕರು ತೊಂದರೆಗೆ ಈಡಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಉ) ಹಾಗಿದ್ದಲ್ಲಿ, ಆದಷ್ಟು ಬೇಗನೆ ಉಳಿದ ಹಣವನ್ನು ಕೊಡಲು ಸರ್ಕಾರದವರು ಸೂಕ್ತ ಕ್ರಮ ಕೈಗೊಳ್ಳುವರೇ ?

ಶ್ರೀ. ಎಂ. ರಾಜಶೇಖರ ಮೂರ್ತಿ (ಕಂದಾಯ ಸಚಿವರು):–

ಅ) 1991ನೇ ಸಾಲಿನ ಅತಿವೃಷ್ಟಿಯ ಪರಿಣಾಮವಾಗಿ ಉಂಟಾದ ನಷ್ಟವನ್ನು ಭರಿಸಲು ಅಧಿಕಾರಿಗಳು 12.99 ಕೋಟಿ ರೂಪಾಯಿಗಳನ್ನು ಕೋರಿದ್ದರು.

ಆ) ಕೋರಲಾಗಿದ್ದ ಹಣದ ವಿವರ ಈ ರೀತಿ ಇದೆ:–

	ಸಂಖ್ಯೆ	ಲಕ್ಷ ರೂ.ಗಳಲ್ಲಿ
1. ರಸ್ತೆ ರಿಪೇರಿಗೊಸ್ಕರ	631	341.170
2. ಶಾಲಾ ಮತ್ತು ಕಟ್ಟಡಗಳ ರಿಪೇರಿಗೋಸ್ಕರ	766	98.770
3. ಕೆರೆಗಳಿಗೆ ಸಂಬಂಧಿಸಿದ ರಿಪೇರಿಗೋಸ್ಕರ	679	444.770
4. ಬಿದ್ದು ಹೋದ ಮನೆಗಳನ್ನು ಕಟ್ಟಲು	9247	138.705
5. ಜನರ ಪ್ರಾಣ ಹಾನಿಗೋಸ್ಕರ	20	5.600
(ಪಾವತಿ ಮಾಡಲಾಗಿದೆ)	ಒಟ್ಟು	1029.015

ಇ) ಸರ್ಕಾರವು ಬಿಡುಗಡೆ ಮಾಡಿರುವ ಹಣದ ವಿವರ ಕೆಳಕಂಡಂತಿದೆ:–

	ಲಕ್ಷ ರೂ.ಗಳಲ್ಲಿ
1. ಬಿದ್ದು ಹೋಗಿರುವ ಮನೆಗಳ ದುರಸ್ತಿಗಾಗಿ ಪರಿಹಾರ	250.00
2. ರಸ್ತೆ, ಕಟ್ಟಡಗಳು ಮತ್ತು ಕೆರೆಗಳ ದುರಸ್ತಿಗಾಗಿ	185.00
3. ಬೆಳೆ ಪರಿಹಾರ	150.00
ಒಟ್ಟು:	585.00

ಈ) ಇಲ್ಲ

ಉ) ಬೇಡಿಕೆ ಮತ್ತು ಹಣ ಲಭ್ಯತೆ ಆಧಾರದ ಮೇಲೆ ಜಿಲ್ಲೆಗೆ ಹಣ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಸಹಕಾರ ಸಮುದಾಯ ಬೇಸಾಯ ಸಂಘಗಳ ಕಾರ್ಯತತ್ಪರತೆ

200 (64) ಶ್ರೀ ಇಲ್ಕಲ್ ವಿಜಯ ಕುಮಾರ್ (ಹೊಸದುರ್ಗ):– ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1) ಸಹಕಾರ ಸಮುದಾಯ ಬೇಸಾಯ ಸಂಘಗಳಿಗೆ ಗುತ್ತಿಗೆ ಆಧಾರದ ಮೇಲೆ ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಜಮೀನನ್ನು ಯಾವ ಯಾವ ಸಹಕಾರ ಸಂಘಗಳಿಗೆ ಗುತ್ತಿಗೆಗೆ ನೀಡಿದೆ ?

2) ಚಿತ್ರದುರ್ಗ ಜಿಲ್ಲೆಯಲ್ಲಿರುವ ಸಂಘಗಳಿಗೆ ಯಾವ ಯಾವ ವರ್ಷದಲ್ಲಿ ಗುತ್ತಿಗೆ ನೀಡಲಾಗಿದೆ ಹಾಗೂ ಜಮೀನಿನ ವಿಸ್ತೀರ್ಣಗಳೇನು ?

3) ಹಾಗಿದ್ದಲ್ಲಿ, ಹೊಸದುರ್ಗ ತಾಲ್ಲೂಕಿನ ಮಧುರೆ ಕಣಿವೆ ಸಹಕಾರ ಸಮುದಾಯ ಬೇಸಾಯ ಸಂಘಕ್ಕೆ ಯಾವಾಗ ಗುತ್ತಿಗೆ ನೀಡಲಾಗಿದೆ ಹಾಗೂ ಅವಧಿಯ ವಿವರ ನೀಡುವುದು ?

4) ಸದರಿ ಸಂಘಕ್ಕೆ ಗುತ್ತಿಗೆ ಅವಧಿಯನ್ನು ಮುಂದುವರೆಸುವ ಉದ್ದೇಶ ಸರ್ಕಾರಕ್ಕೆ ಇದೆಯೇ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಸಹಕಾರ ಸಚಿವರು):–